**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 13.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ BHK ವಕೀಲರಿಂದ :**

ಪ್ರತಿವಾದಿ 2 ರವರು ನನಗೆ ದೊಡ್ಡಪ್ಪನ ಮಗಳಾಗಬೇಕು. ನಾನು ಈಗ ಚಿಕ್ಕೋಡಿಯಲ್ಲಿ ವಾಸವಾಗಿರುವೆನು. ನಾನು ವಾದಿ ಮತ್ತು ಪ್ರತಿವಾದಿ 1 ರವರ ಮಧ್ಯೆ ಹಿರಿತನ ಮಾಡಿರುವೆನು. ಈ ಹಿರಿತನ ಮಾಡಿದ ದಿನಾಂಕ ನನಗೆ ನೆನಪಿರುವುದಿಲ್ಲ, ಆದರೆ ಮುಧೋಳ ಪಟ್ಟಣದಲ್ಲಿ ಈ ಹಿರಿತನ ಮಾಡಿರುವೆನು. ಹಿರಿಯರೆಂದರೆ ಸದಾಶಿವ ಲಕ್ಷ್ಮಣ ಕೋಳಿ, ಈಗ ಅವರು ಮೃತ ಪಟ್ಟಿರುವರು. ಇವರ ಮಗ ಮನೋಜ ಹಾಗೂ ಊರಿನ ಹಿರಿಯರು ಭಾಗವಹಿಸಿದ್ದರು.

2. ವಾದಿ 1 ರವರು ನನ್ನ ಮಗಳಾಗಬೇಕು ಎಂದರೆ ಸರಿ. ವಾದಿ 1 ಮತ್ತು ಪ್ರತಿವಾದಿ 1 ರವರ ಮಧ್ಯೆ ವಿವಾಹವಾದ 6-7 ತಿಂಗಳ ನಂತರ ಪ್ರತಿವಾದಿ 1 ರವರಿಗೆ ಸೋಯಾಸಿಸ್ ಕಾಯಿಲೆ ಬಂದಿರುವುದು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಈ ಕಾಯಿಲೆಯ ಬಗ್ಗೆ ಈ ವಿವಾಹದ ನಂತರ ಗೊತ್ತಾಗಿರುವುದಾಗಿ ಎಂದು ಉತ್ತರಿಸುವರು. ವಾದಿ 1 ರವರು 2020 ಕರೋನ ಮಹಾಮಾರಿ ರೋಗ ಬಂದಾಗಿನಿಂದ ನಮ್ಮ ಮನೆಯಲ್ಲಿ ಇರುವಳು.

3. ದಾವಾ ಆಸ್ತಿಗಳು ಎಲ್ಲವೂ ಪ್ರತಿವಾದಿ 1 ರವರ ಪೂರ್ವಾರ್ಜಿತವಾಗಿ ಬಂದ ಆಸ್ತಿಗಳು ಆಗಿರುವವು. ಈ ದಾವಾ ಆಸ್ತಿಗಳು ಅಸಲು ದಾವಾ ನಂ. 44/2019 ರ ಡಿಕ್ರಿಯ ಪ್ರಕಾರ ಪೂರ್ವಾರ್ಜಿತ ಆಸ್ತಿಗಳಾಗಿರುವವು. ಆ ಡಿಕ್ರಿಯು ಯಾರ ಯಾರ ಮಧ್ಯೆ ಆಗಿರುವುದು ಎಂದು ನನಗೆ ಹೇಳಲು ಆಗುವುದಿಲ್ಲ. ಗೋವಾ ರಾಜ್ಯದಲ್ಲಿ ಇರುವ ಆಸ್ತಿ ಪ್ರತಿವಾದಿ 2 ರವರಿಗೆ ಹೇಗೆ ಬಂದಿರುವುದು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಆದರೆ ಪ್ರತಿವಾದಿ 2 ವಿನ ಗಂಡ ಜೀವಂತವಿದ್ದಾಗ ಖರೀದಿ ಮಾಡಿರುವರು. ಮುಧೋಳ ಪಟ್ಟಣದಲ್ಲಿ ಇರುವ ಆಸ್ತಿ ಪ್ರತಿವಾದಿ 1 ರವರ ಪೂರ್ವಾರ್ಜಿತ ಆಸ್ತಿಯಾಗಿರುವುದು. ಮುಧೋಳ ಪಟ್ಟಣದಲ್ಲಿ ಇರುವ

ಸಿಟಿಎಸ್ ಆಸ್ತಿಯು ಪ್ರತಿವಾದಿ 1 ರಿಂದ 3 ಹಾಗೂ ಪ್ರತಿವಾದಿ 1 ರವರ ಸಹೋದರ ಸಂಬಂಧಿಗಳ ಹೆಸರಿನಲ್ಲಿಯೂ ಸಹ ಇರುವುದು. ಆ ಆಸ್ತಿಯಲ್ಲಿ ಪ್ರತಿವಾದಿ 1 ರವರಿಗೆ ಎಷ್ಟು ಪಾಲು ಇರುವುದು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗೋವಾ ರಾಜ್ಯದಲ್ಲಿ ಇರುವ ಆಸ್ತಿಯು ಪ್ರತಿವಾದಿ 2 ರವರ ಗಂಡ ಯಾವ ವರ್ಷದಲ್ಲಿ ಎಷ್ಟು ಹಣಕ್ಕೆ ಮತ್ತು ಯಾರ ಕಡೆಯಿಂದ ಖರೀದಿ ಮಾಡಿರುವರು ಎಂದು ನನಗೆ ಅಷ್ಟೊಂದು ಮಾಹಿತಿ ಇರುವುದಿಲ್ಲ. ಈ ಆಸ್ತಿ ಖರೀದಿ ಮಾಡಲು ಹಣಕಾಸಿನ ಸಹಾಯ ಯಾರು ಮಾಡಿರುವರು ಎಂಬುದರ ಬಗ್ಗೆಯೂ ಸಹ ನನಗೆ ಮಾಹಿತಿ ಇರುವುದಿಲ್ಲ.

4. ವಾದಿ 1 ರವರು ಪ್ರತಿವಾದಿ 1 ವಿನ ವಿರುದ್ಧ ಚಿಕ್ಕೋಡಿ ನ್ಯಾಯಾಲಯದಲ್ಲಿಯೂ ಸಹ ಪ್ರಕರಣ ದಾಖಲು ಮಾಡಿರುವರು ಎಂದರೆ ಸರಿ . ಅದು ವಿಚಾರಣೆಯ ಹಂತದಲ್ಲಿ ಇರುವುದು ಎಂದರೆ ಸರಿ. ಪ್ರತಿವಾದಿ 1 ರವರು ವಾದಿ 1 ಮತ್ತು 2 ರವರ ಕಾಳಜಿಯನ್ನು ವಹಿಸುವುದಿಲ್ಲ ಮತ್ತು ಮನೆಯಲ್ಲಿ ಅವರಿಗೆ ಸರಿಯಾಗಿ ಸ್ಪಂದನೆ ಮಾಡುತ್ತಿರುವುದಿಲ್ಲ ಮತ್ತು ಅವರಿಗೆ ಮಾನಸಿಕ ಹಿಂಸೆ ನೀಡಿರುವನು. ಈ ಮಾನಸಿಕ ಹಿಂಸೆ ನೀಡದ ಬಗ್ಗೆ ಪ್ರತಿವಾದಿ 1 ವಿನ ವಿರುದ್ಧ ಯಾವುದೇ ದೂರು ದಾಖಲು ಮಾಡಿರುವುದಿಲ್ಲ. ಪ್ರತಿವಾದಿ 1 ರವರಿಗೆ ಸೋಯಾಸಿಸ್ ಕಾಯಿಲೆ ಇರುವುದರಿಂದ, ಆ ಕಾರಣಕ್ಕೆ ವಾದಿ 1 ರವರಿಗೆ ಪ್ರತಿವಾದಿ 1 ರವರ ಜೊತೆ ವೈವಾಹಿಕ ಜೀವನ ನಡೆಸುವ ಇಚ್ಚೆ ಹೊಂದಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ವಾದಿಯು ವಿನಾ ಕಾರಣ ಪ್ರತಿವಾದಿ 1 ವಿನ ವಿರುದ್ಧ ಪ್ರಕರಣ ದಾಖಲು ಮಾಡಿರುವಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.10.14 11:01:57 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ